ಚಾಳಿ? ಕೊನೇಪಕ್ಷ ಮನೆ ತಪ್ಪಿದ ಪ್ರಾಯದ ಹೆಣ್ಣುಮಗಳೊಬ್ಬಳು ಮನೆಯಲ್ಲಿದ್ದಾಳೆ, ಅವಳಿಗೆ ಏನನಿಸಬಹುದು ಅನ್ನುವ ವಿವೇಚನೆ ಬೇಡವಾ? ಆಡಲಾರ. ಅನುಭವಿಸಲಾರ. ಉರುಉರು ಅನ್ನುತ್ತಿದ್ದ ಗಂಡನ ಮುಖ ನೋಡಿ ಅವನ ಆಂತರ್ಯ ಅರ್ಥಮಾಡಿಕೊಂಡಿದ್ದಳು ಸೀತಾಲಕ್ಷ್ಮಿ.

ಕೆಲವೊಮ್ಮೆ ಅವಳಿಗೇ 'ಅತಿ... ಅತೀ...' ಅನಿಸುತ್ತಿತ್ತು ವಾರಗಿತ್ತಿಯ ವರ್ತನೆ. ಇಂಬಳ ಕಚ್ಚಿದರೆ ಯಾರಾದರೂ ಥಕಥೈ ಕುಣಿಯುತ್ತಾರಾ? ಅವಳೂ ಹಳ್ಳಿಯಲ್ಲಿ ಹುಟ್ಟಿ ಬೆಳೆದವಳಲ್ಲವಾ? ಮಳೆಗಾಲ ಅಂದಮೇಲೆ ಇಂಬಳದ ಕಾಟ ಇದ್ದಿದ್ದೇ. ಚಿರಂಜೀವಿ ಸಂತಾನಗಳು. ಬೇಸಿಗೆಯಲ್ಲಿ ಒಣಗಿ ದರಗಿಗೆ ಅಂಟಿಕೊಂಡಿದ್ದಂತವು ಮಳೆ ಬರುತ್ತಿದ್ದ ಹಾಗೆ ಅಮೃತ ಕುಡಿದವುಗಳ ಹಾಗೆ ಚಿಗಿತುಕೊಳ್ಳುತ್ತವೆ. ಗೊತ್ತೇ ಆಗದಂತೆ ಓಡಾಡುವವರ ಕಾಲಿಗೆ ಕಚ್ಚಿಕೊಂಡು ರಕ್ತ ಹೀರಿ, ರಕ್ತ ಹೀರುವಾಗ ಗೊತ್ತೇ ಆಗುವುದಿಲ್ಲ. ನೋವಾಗುವುದಿಲ್ಲ. ಯಃಕಶ್ಚಿತ್ ಒಂದು ಚಿಗಟ ಕಚ್ಚಿದರೂ ತುರಿಸುತ್ತದೆ. ಹೊಟ್ಟೆಬಿರೀ ರಕ್ತ ಹೀರಿ ಊದಿಕೊಂಡ ಇಂಬಳ ಬಿದ್ದು ಹೋದಮೇಲೆ ಗಾಯದಿಂದ ಒಸರುವ ರಕ್ತ ನೋಡಿ ಇಂಬಳ ಕಚ್ಚಿತ್ತೆಂದು ಗೊತ್ತಾಗಬೇಕು. ಹೊಟ್ಟೆ ತುಂಬಿ ಅವಾಗಿ ಬಿದ್ದು ಹೋಗುವ ಮುಂಚೆ ಗಮನಕ್ಕೆ ಬಂದರೆ ಅವನ್ನು ಕಿತ್ತು ತೆಗೆಯುವುದೇ ಹರಸಾಹಸ. ಎಷ್ಟೇ ಕಿತ್ತೆಳೆದರೂ ಜಗ್ಗದೆ ಚೋಟು ಹಾಕುತ್ತಾ ಅಂಟಿಕೊಂಡು, ಅವನ್ನು ತೆಗೆಯಲು ಪ್ರತ್ಯೇಕ ಮಾರ್ಗೋಪಾಯಗಳೇ ಬೇಕು. ತಂಬಿಗೆ ತೆಗೆದುಕೊಂಡು ಗುಡ್ಡದ ಬದಿ ಹೋಗಿದ್ದಳು ಕನಕ. ಸಣ್ಣಗೆ ಹನಿಯುತ್ತಿದ್ದ ಮಳೆಗೆ ತಲೆಯ ಮೇಲೆ ಸೆರಗು. ಹಿತ್ತಲಿಗೆ ಬಂದವಳು ಬಚ್ಚಲು ಹೊಗುವ ಮುಂಚೆ ಅದೆಂತಾ ಕಾಕು ಹಾಕಿದಳೆಂದರೆ ಮನೆಯಲ್ಲಿದ್ದವರು ಬಿಟ್ಟ ಕೆಲಸ ಬಿಟ್ಟು ಓಡಿ ಬಂದಿದ್ದರು. 'ಏನಾಯ್ತೇ?' ಎನ್ನುತ್ತಿದ್ದಾರೆ ಎಲ್ಲರೂ ಅವಳನ್ನು ಸುತ್ತುವರಿದು. ಸೀರೆ ನೆರಿಯನ್ನು ಒಂದು ಬದಿಗೆ ಎತ್ತಿ ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದ ಕನಕ ಮೊಣಕಾಲಿನ ಕಡೆ ಕೈ ತೋರಿಸಿದ್ದಳು. ಡುಮ್ಮಗೆ ಊದಿಕೊಂಡಿದ್ದ ಇಂಬಳ ಕಚ್ಚಿಕೊಂಡಿತ್ತು.

'ಇಷ್ಟೇನಾ? ಹಾವು ಮೆಟ್ಟಿದೋರ ಹಂಗೆ ಆಡ್ತೀಯಲ್ಲೇ ಪುಣ್ಯಾತ್ಗಿತ್ತಿ...' ವೆಂಕಮ್ಮ ತಡೆಯದೆ ಹೇಳಿದ್ದರು. 'ತೇಗೀರೀ, ಮೊದಲು ಇದನ್ನ ತೆಗೆದು ಬಿಸಾಕಿ' ಅವಳು ಸೀರೆನೆರಿಯನ್ನು ಇನ್ನಷ್ಟು ಮೇಲಕ್ಕೆಳೆದುಕೊಂಡಾಗ ತಟ್ಟನೆ ಒಳಗೆ ಹೋಗಿದ್ದ ಶಿವರಾಮ. ವೆಂಕಟರಾಮು ಹೆಂಡತಿಯ ಕಾಲಿಗಂಟಿದ್ದ ಇಂಬಳವನ್ನು ಕಿತ್ತು ಎಳೆದು ಬಚ್ಚಲೊಲೆಯಲ್ಲಿ ನಂದಾದೀಪದಂತೆ ಸದಾ ಉರಿಯುತ್ತಿದ್ದ ಒಲೆಗೆ ಬಿಸಾಕಿ, ಚುಂಯ್ ಎನ್ನುವ ಸದ್ದಿನೊಂದಿಗೆ ಹರಡಿಕೊಂಡಿತ್ತು ನಾತ. ಹೆಂಗಸರು ಪರಸ್ಪರ ಮುಖ ನೋಡಿಕೊಂಡು ನಕ್ಕಿದ್ದರು.

'ಯಾವತ್ತೂ ಇಂಬಳ ಕಚ್ಚಿರ್ಲಿಲ್ವೇನೇ ನಿಂಗೆ? ಕಾಕು ಹಾಕಿ ಮನೇನೇ ನಡುಗಿಸಿಬಿಟ್ಟಿಲ್ಲ?' ತಮಾಷಿ ಮಾಡಿದ್ದ ವೆಂಕಟರಾಮು.

'ಇಂಬಳ ಅಂದ್ರೆ ನಂಗೆ ಹೆದರಿಕೆ ಕಣ್ರೀ. ಅದ್ಯಾಕೋ ಗೊತ್ತಿಲ್ಲ...' ಹೊಸ ಹೆಂಡತಿ ಮುದ್ದಾಗಿ ಹೇಳುವಾಗ ವೆಂಕಟರಾಮು ಅವಳನ್ನು ಕಣ್ಣಲ್ಲೇ ತಿನ್ನುತ್ತಿರುವುದನ್ನು ಕಂಡು ಬಾಕಿಯವರು ಅಲ್ಲಿಂದ ಜಾಗ ಖಾಲಿ ಮಾಡಿದ್ದರು. ಕನಕನ ಕುರಿತಾಗಿ ಶಿವರಾಮನಲ್ಲಿ ಹುಟ್ಟಿಕೊಂಡಿರಬಹುದಾದ ಅಸಹನೆ, ಅಸಮಾಧಾನಗಳು ಬೇರು ಬಿಟ್ಟು ಬೆಳೆಯಲು ಇಂಥ ಸಣ್ಣಪುಟ್ಟ ಸಂಗತಿಗಳೂ ಕಾರಣವಾಗಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಹಾಗೆನಿಸಿತ್ತು ಸೀತಾಲಕ್ಷ್ಮಿಯ ಆಂತರ್ಯಕ್ಕೆ.

ಇನ್ನೇನು ಏಳನೆಯ ತಿಂಗಳು ಶುರುವಾಗುತ್ತಿದ್ದಂತೆ ಬಯಕೆಶಾಸ್ತ್ರ ಮಾಡಿ ತೌರಿಗೆ ಕಳಿಸುತ್ತಾರೆ ಎಂದು ಸೀತಾಲಕ್ಷ್ಮಿ ಸಡಗರಿಸುತ್ತಿದ್ದಳು. ಅವಳ ಸಡಗರಕ್ಕೆ ಕಾರಣವಾದ ಸಂಗತಿ ಅತ್ತಿಗೆಯ ಮನಸ್ಸನ್ನು ಇಷ್ಟು ಗೀರುತ್ತದೆ ಎಂದು ಕಮಲ ಬಾಯ್ಬಿಟ್ಟು ಹೇಳುವವರೆಗೆ ಅವಳಿಗೆ ಗೊತ್ತೇ ಆಗಿರಲಿಲ್ಲ. ಕಮಲತ್ತಿಗೆ ತನ್ನನ್ನು ಇಷ್ಟು ಹಚ್ಚಿಕೊಂಡಿದ್ದಾರಾ? ಮನೆಗೆಲಸದ ವಿಷಯವನ್ನು ಮುಂದು ಮಾಡಿಕೊಂಡು ಕಮಲ ಮಾತಾಡುತ್ತಿದ್ದರೂ ಅದು ಅಷ್ಟೇ ಅಲ್ಲ ಎಂದು ಸೀತಾಲಕ್ಷ್ಮಿಗೆ ಅನಿಸುತ್ತಿದೆ. ಅವಳು ಮದುವೆಯಾಗಿ ಬರುವ ಮುಂಚೆ ಈ ಮನೆಯ ಕೆಲಸಗಳು ಸುಸೂತ್ರವಾಗಿ ನಡೆಯುತ್ತಿರಲಿಲ್ಲವಾ? ಯಾವುದು ನಿಂತು ಹೋಗಿತ್ತು? ವಾಸ್ತವದ ಸಂಗತಿ ಅಂದರೆ ತನ್ನ ಅಗಲಿಕೆ ಅತ್ತಿಗೆಗೆ ಕಷ್ಟವಾಗಿರುವುದಕ್ಕೇ ಏನೇನೋ ಮಾತು. ಇರುವ ಸಂಗತಿ ಹೇಳಿಕೊಳ್ಳದೆ ಸುತ್ತುಬಳಸು. ಅತ್ತಿಗೆಯ ಕುರಿತು ಮನಸ್ಸು ಮೃದುವಾಗುತ್ತಿದ್ದಂತೆ ಅವಳನ್ನು ಸಂಪೂರ್ಣ ಕರಗಿಸಿ ಕಣ್ಣಲ್ಲಿ ನೀರಿಳಿಸುವ ಘಟನೆ ನಡೆದುಬಿಟ್ಟಿತು. ಮಂಚದ ಮೇಲೆ ಕಾಲಿಳಿಬಿಟ್ಟುಕೊಂಡು ಕೂತಿದ್ದ ಬಸುರಿ ಹುಡುಗಿಯ ಪಕ್ಕ ಬಂದು ಕೂತಿದ್ದಳು ಕಮಲಾ.

'ಒಂಚೂರು ನಿನ್ನ ತೊಡೆ ಮೇಲೆ ಮಲಗ್ಲೇನೆ?' ಎಂದು ಕೇಳಿದಳು.

'ಅಯ್ಯೋ, ಮಲಗಿ ಮಾರಾಯ್ರಾ...'

'ಭಾರ ಬಿಡಲ್ಲ ಕಣೇ, ಹಗೂರಕ್ಕೆ...'

ಕೂತಲ್ಲೇ ಬಾಗಿ ಸೀತಾಲಕ್ಷ್ಮಿಯ ಹೊಟ್ಟೆಗೆ ಆತುಕೊಳ್ಳುವಂತೆ ತನ್ನ ಕಪೋಲವನ್ನಿಟ್ಟಳು ಕಮಲಾ. ಒಳಗಿದ್ದ ಜೀವಕ್ಕೆ ಇದ್ಯಾವುದೋ ಹೊಸ ಸ್ಪರ್ಶ ಅನಿಸಿರಬೇಕು, ನಿಧಾನಕ್ಕೆ ಹೊರಳಾಡಿತು ಒಡಲೊಳಗಿನ ಕಂದ. ಮೈ ನವಿರೆದ್ದಂತೆ ಕಮಲಾ ಪಿಸುಗುಟ್ಟಿದಳು,

'ಓಡಾಡ್ತಿದೆ ಕಣೇ. ಎಚ್ಚರ ಆಯ್ತೇನೋ...'

ನಕ್ಕಳು ಸೀತಾಲಕ್ಷ್ಮಿ.

'ಒಂದೊಂದ್ಸಲ ಒದೆಯುತ್ತೆ ಮಾರಾಯ್ರಾ. ಹೊರಗೆ ಬಂದ ಮೇಲೆ ಇನ್ನೆಷ್ಟು ಚಾಷ್ಟೆ ಮಾಡುತ್ತೋ?'

'ಮಾಡ್ಲಿ ಬಿಡು. ಮಕ್ಕಳು ಚಾಷ್ಟೆ ಮಾಡ್ತಿದ್ರೇನೇ ಚಂದ...'

ಕಮಲಾ ಕೋಣೆಯಿಂದಾಚೆ ಹೋದ ಮೇಲೆ ಜೀವಮಾನದಲ್ಲೆಂದೂ ಇಂಥ ಸುಖ ಕಲ್ಪಿಸಿಕೊಳ್ಳಲಾಗದ ಅತ್ತಿಗೆಯ ಪಾಡು ನೆನೆದು ಸೀತಾಲಕ್ಷ್ಮಿಗೆ ದುಕ್ಕ ಬಂತು. ಸೆರಗು ಮುಂದಕ್ಕೆಳೆದುಕೊಂಡು ಕಣ್ಣಿಗೆ ಒತ್ತಿ ಕಣ್ಣೀರು ಇಂಗಿಸಿಕೊಂಡಳು ಸೀತಾಲಕ್ಷ್ಮಿ. ಅವತ್ತು ರಾತ್ರಿ ಆ ಮನೆಯಲ್ಲೊಂದು ಅಘಟಿತ ಘಟನೆ ನಡೆದು ಹೋಯ್ತು. ಕನಸಿನಲ್ಲಿಯೂ ಸಹ ಯಾರೂ ಕಲ್ಪಿಸಿಕೊಳ್ಳಲಾಗದ್ದು. ಊಹಾತೀತವಾದದ್ದು.

***

ಬೆಳಿಗ್ಗೆ ಗಂಟೆ ಎಂಟಾಗುತ್ತಾ ಬಂದರೂ ಕೋಣೆ ಬಿಟ್ಟು ಎದ್ದು ಬಂದಿರಲಿಲ್ಲ ಕಮಲಾ. ಬೆಳಿಗ್ಗೆ ಐದೂವರೆ, ಆರರ ಒಳಗೆ ಏಳುವುದು ಅವಳ ಅಭ್ಯಾಸ. ಮುಖ ತೊಳೆದು, ಕಾಫಿ ಕುಡಿದು, ಒಂದು ದೊಡ್ಡ ಹರಿವಾಣ ಹಿಡಿದು ಹೂದೋಟಕ್ಕೆ ಹೋದರೆ ಅದು ತುಂಬುವವರೆಗೆ ಅಲ್ಲೇ. ಒಳಗೆ ಬಂದವಳು ತಿಂಡಿಗೆ ಏನಾದರೂ ಸಹಾಯ ಮಾಡಬೇಕಾದರೆ ಮಾಡುತ್ತಾಳೆ. ಇಲ್ಲದಿದ್ದರೆ ಹಿತ್ತಲಲ್ಲಿ ಕಾಲಾಡಿಸಿಕೊಂಡು ಮೇಲೋಗರಕ್ಕೆ ತರಕಾರಿ ತರುತ್ತಾಳೆ. ತನಗೇ ಮನಸ್ಸು ಬಂದಲ್ಲಿ ತರಕಾರಿ ಸೋಸಿಡುತ್ತಾಳೆ. ಹೆಚ್ಚುವುದಾದಲ್ಲಿ ಹೆಚ್ಚುತ್ತಾಳೆ. ಅವಳಿಗೆ 'ಇಂತಾದ್ದೇ ಕೆಲಸ ಮಾಡು' ಎಂದು ವೆಂಕಮ್ಮ ನಿಯಮ ಹಾಕಿರಲಿಲ್ಲ. ಅವಳೂ ಕಟ್ಟುಪಾಡಿಗೆ ಒಳಪಟ್ಟವಳಲ್ಲ. ಸೀತಾಲಕ್ಷ್ಮಿ ಬಂದ ಮೇಲೆ ಇನ್ನೂ ಸಲೀಸಾಗಿತ್ತು. ವೆಂಕಮ್ಮ ಮಗಳನ್ನು ಕರೆಯುವುದನ್ನು ಬಿಟ್ಟು ಸೊಸೆಯನ್ನೇ ಕರೆಯುತ್ತಿದ್ದರು.

'ಏನಾಯ್ತು ಇವಳಿಗೆ? ಹುಷಾರು ತಪ್ಪಿದೆಯಾ? ಜ್ವರ ಗಿರ? ಮಳೆಯಲ್ಲಿ ನೆನೆದಿದ್ದಳಾ? ಸೀತ ಗೀತ?' ವೆಂಕಮ್ಮ ಯೋಚಿಸುತ್ತಾ ತಮ್ಮ ಕೆಲಸ ಮಾಡಿಕೊಳ್ಳುತ್ತಿದ್ದರು. ಸೀತಾಲಕ್ಷ್ಮಿ ಈಗ ಕೊಟ್ಟಿಗೆಗೆ ಹಾಲು ಕರೆಯಲು ಹೋಗುತ್ತಿರಲಿಲ್ಲ. ಚಂಗುಲಿ ದನವೇನಾದರೂ ಕಾಲು ಕೊಡಕಿದರೆ ಫಕ್ಕನೆ ಅವಳಿಗೆ ಏಳುವುದಕ್ಕೆ ಆಗುವುದಿಲ್ಲ. ಬಸುರಿ ಕೂತೆದ್ದು ಮಾಡಿ ಹೊಟ್ಟೆಯೊಳಗಿರುವ ಕಂದನಿಗೆ ಕಷ್ಟ ಕೊಡುವುದು ಬೇಡ ಎಂದು ಎಲ್ಲರಂತೆ ಅವರೂ ಅಂದುಕೊಂಡಿದ್ದರು. ಇನ್ನು ಕನಕ ಕೊಟ್ಟಿಗೆಯ ದಿಕ್ಕಿಗೆ ತಲೆ ಹಾಕಿ ಮಲಗುತ್ತಿರಲಿಲ್ಲ. ಅಲ್ಲದೆ ಹೊಸದಾಗಿ ಮನೆಗೆ ಬಂದು ಇನ್ನೂ ಇಲ್ಲಿನ ರೀತಿರಿವಾಜುಗಳಿಗೆ ಅಭ್ಯಸ್ಥಳಾಗುತ್ತಿದ್ದವಳಿಗೆ ವೆಂಕಮ್ಮ ಕರೆದು ಕೆಲಸ ಹೇಳುತ್ತಿರಲಿಲ್ಲ. ಬೆಳಿಗ್ಗೆ ಎದ್ದ ಕೂಡಲೆ ಎಲ್ಲರಂತೆ ಅವಳು ತಲೆಗೆ ಹಣಿಗೆ ಮುಟ್ಟಿಸದೆ ಹೇಗೆಂದರೆ ಹಾಗಿರುತ್ತಿರಲಿಲ್ಲ. ಮುಖ ತೊಳೆದ ಮೇಲೆ ತಲೆ ಬಾಚಿಕೊಳ್ಳಬೇಕು. ಲಕ್ಷಣವಾಗಿ ಹಣೆಗಿಟ್ಟುಕೊಳ್ಳಬೇಕು. ದಿನಬಳಕೆಗೆ ಅವಳು ಉಡುತ್ತಿದ್ದುದು ಹತ್ತಿಯ ಜಡ್ಡು ಸೀರೆಗಳನ್ನಲ್ಲ. ಗಾಢಬಣ್ಣದ ಹತ್ತಿ ಸೀರೆಗಳನ್ನು. 'ಯಾವಾಗ ನೋಡಿದ್ರೂ ಮದುವೆಮನೆಗೆ ಹೊರಟೋಳ ಥರ ಕಾಣ್ತಾಳಪ್ಪಾ...' ಎಂದು ವೆಂಕಮ್ಮ ಹೇಳುತ್ತಿದ್ದುದರ ಹಿಂದೆ ಮತ್ತೊಂದು ಕಾರಣ ಇತ್ತು. ತೌರಿನಲ್ಲಿ ಹಾಕಿದ್ದ ನಗಗಳಲ್ಲಿ ಎಲ್ಲವನ್ನೂ ಅವಳು ಬಿಚ್ಚಿಟ್ಟಿರಲಿಲ್ಲ. ಇನ್ನೂ ಅವಳ ಮೈಮೇಲೆ ಕರಿಮಣಿಸರದ ಜೊತೆ ಎರಡೆಳೆ ಅವಲಕ್ಕಿ ಸರ, ಕೈಯಲ್ಲಿ ಎರಡು ಜೊತೆ ಚಿನ್ನದ ಬಳೆ, ಬೆರಳಲ್ಲಿ ಉಂಗುರ ಶೋಭಿಸುತ್ತಿತ್ತು.

ಉಳಿಕೆ ನಗಗಳನ್ನು ತೌರಿನಲ್ಲೇ ಬಿಚ್ಚಿಟ್ಟು ಬಂದಿದ್ದಳು ಕನಕ. ಮೈ ಮೇಲಿದ್ದುದನ್ನು ತೆಗೆಯುವ ಯೋಚನೆ ಅವಳಿಗಿತ್ತೋ ಇಲ್ಲವೋ? ವೆಂಕಮ್ಮ